Available online at www.elixirpublishers.com (Elixir International Journal)

Literature

Elixir Literature 104 (2017) 45611-45613

ISSN: 2229-712X

# In the Vortex of Maimanas - Womens Mental Anguish
# ಮೈಮನಗಳ ಸುಳಿಯಲ್ಲಿ – ಹೆಣ್ಣಿನ ಮಾನಸಿಕ ತಲ್ಲಣಗಳು

Bullannavar Basusab, ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ, Govt First Grade College Gadag, Karnataka

**ARTICLE INFO**

**Article history:**
Received: 22.January 2017;
Received in revised form:
12 February 2017;
Accepted: 5 March 2017;

**Keywords**
Exploitation – ಶೋಷಣೆ
Patience – ತಾಳ್ಮೆ
Mental – ಮಾನಸಿಕ
Patience – ಸಹನೆ
Female - ಹೆಣ್ಣು

**ABSTRACT**

It is significant that Karanta has made an effort to unravel the sensitivity of women's psychological pains in a way that the female can see her identity as a way of violence, oppression, helplessness. Her sacrifices, sacrifices, patience, tolerance and duty-keeping can be seen in the mind's eye, even in the shackles of female problems.

ಹೆಣ್ಣು ತನ್ನ ಅಸ್ಮಿತೆಯನ್ನು ಹಿಂಸೆ, ದಬ್ಬಾಳಿಕೆ, ಅಸಹಾಯಕತೆಯ ಮಾರ್ಗವಾಗಿ ಕಾಣುವ ರೀತಿಯಲ್ಲಿ ಹೆಣ್ಣಿನ ಮಾನಸಿಕ ನೋವುಗಳ ಸೂಕ್ಷ್ಮತೆಯನ್ನು ಬಿಚ್ಚಿಡುವ ಪ್ರಯತ್ನವನ್ನು ಕಾರಂತರು ಮಾಡಿರುವುದು ಗಮನಾರ್ಹ. ಅವಳ ತ್ಯಾಗ, ತ್ಯಾಗ, ತಾಳ್ಮೆ, ಸಹನೆ ಮತ್ತು ಕರ್ತವ್ಯಪಾಲನೆಯನ್ನು ಮನಸ್ಸಿನ ಕಣ್ಣಿನಲ್ಲಿ ಕಾಣಬಹುದು, ಹೆಣ್ಣಿನ ಸಮಸ್ಯೆಗಳ ಸಂಕೋಲೆಯಲ್ಲೂಕಾಣಬಹುದು.

© 2017 Elixir All rights reserved.

**1 ಪೀಠಿಕೆ:**

ಕಾರಂತರ ಸೂಕ್ಷ್ಮಸಂವೇದನಾಶೀಲತೆ, ಅವರು ಸಮಾಜದ ಬಗ್ಗೆ ಇಟ್ಟಿರುವ ಕಾಳಜಿ, ಸ್ತ್ರೀ–ಪುರುಷರ ನಡುವಿನ ಅಸಮಾನತೆಗಳನ್ನು ಪಾತ್ರಗಳ ಮೂಲಕ ಕಾದಂಬರಿಯಲ್ಲಿ ಚಿತ್ರಿಸಿರುವದು ನಿಜಕ್ಕೂ ಅರ್ಥವತ್ತಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕಂಡು ಬರುವಂತಹ ಅನೇಕ ಸಮಸ್ಯೆಗಳು, ಸಮಸ್ಯೆಗಳ ಸಂಕೋಲೆಯಲ್ಲಿಯೂ ಹೆಣ್ಣು ಯಾವ ರೀತಿ ತನ್ನ ಅಸ್ಮಿತೆಯನ್ನು ಕಂಡುಕೊಂಡಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಂದಿನಿಂದ ಇಂದಿನವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ದೌರ್ಜನ್ಯ, ದಬ್ಬಾಳಿಕೆ, ಅಸಹಾಯಕತೆಯ ತೋಳಲಾಟದಲ್ಲಿಯೇ ತನ್ನ ಜೀವನ ನಿರ್ವಹಿಸುವ ಅವಳ ತ್ಯಾಗ, ಬಲಿದಾನ, ತಾಳ್ಮೆ, ಸಹನೆ, ಕರ್ತವ್ಯಪಾಲನೆ ಇವೆಲ್ಲವುಗಳನ್ನು ಮೈಮನಗಳ ಸುಳಿಯಲ್ಲಿ ಎಳೆ ಎಳೆಯಾಗಿ ಬಿಚ್ಚಿಡುವ ಪ್ರಯತ್ನವನ್ನು ಮಾಡಿರುವದು ಗಮನಾರ್ಹವಾದುದು. ಮನುಷ್ಯ ಸಂಬಂಧ ಹಾಗೂ ಹೆಣ್ಣಿನ ಮಾನಸಿಕ ವೇದನೆಗಳ ಸೂಕ್ಷ್ಮತೆಯನ್ನು ಇಲ್ಲಿ ಕಾಣಬಹುದು.

**2. ವಿಷಯ:**

ಮೈ ಮತ್ತು ಮನ ಹೆಣ್ಣಿನ ಭಿನ್ನತೆಗಳನ್ನು, ಅವಳ ಮಾನಸಿಕ ತಲ್ಲಣಗಳು, ಸಮಾಜದಲ್ಲಿ ಕೊಟ್ಟಿರುವ ಸ್ಥಾನಮಾನಗಳು ಪುರುಷ ಪ್ರಧಾನ ವ್ಯವಸ್ಥೆ, ಎಲ್ಲ ಕ್ಷೇತ್ರದಲ್ಲೂ ಆಗುವಂತಹ ಮಾನಸಿಕ ಯಾತನೆಗಳನ್ನು ಕಾರಂತರು ಮನೋಜ್ಞವಾಗಿ ತಲಸ್ಪರ್ಷಿ ಅಧ್ಯಯನ ಮೂಲಕ ತಿಳಿಯಪಡಿಸಿದ್ದಾರೆ. ಈ ಕಾದಂಬರಿಯಲ್ಲಿ ಬರುವಂತಹ ಸಮಸ್ಯೆಗಳು, ವಿಷಯ ವಸ್ತು ಇಂದಿಗೂ ಸಹ ಕಾಣುವಂತಹ ವಿಷಯಗಳಾಗಿ ದಿನನಿತ್ಯವೂ ಸಮಾಜದಲ್ಲಿ ಕಂಡು ಬರುವಂತಹುಗಳಾಗಿವೆ.

"ಕೌಟುಂಬಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕವಾಗಿ ಶೋಷಣೆಗೊಳಪಡುತ್ತಿದ್ದಾಳೆ ಎಂಬುದನ್ನು ಕಾರಂತರು ಚಿತ್ರಿಸಿರುವ ಪಾತ್ರ–ಚಿತ್ರಣಗಳ ಮೂಲಕ ವಿಶ್ಲೇಷಿಸಿ, ವಿಮರ್ಶಿಸುವ ಅಗತ್ಯವಿದೆ.1 ಒಂದು ಹೆಣ್ಣಿನ ಶೋಷಣೆ ಮಾನಸಿಕ ಕೌಟುಂಬಿಕ ಯಾತನೆಯ ನೆಲೆಗಳನ್ನು ಭಿನ್ನವಾಗಿ ಚಿತ್ರಿಸಿದ್ದಾರೆ. ಇಂದಗೂ ಇದರಲ್ಲಿಯ ಅಂಶಗಳು ದಿನನಿತ್ಯದ ಬದುಕಿನಲ್ಲಿ ಕಂಡು ಬರುವ ವಿಷಯಗಳೇ ಆಗಿವೆ.

**1. Introduction**

Karanth's sensitivity, his concern for the society, the disparities between men and women are depicted in the novel through the characters. Even in the chain of many problems and problems that are seen in the present situation, the girl has somehow found her identity. It is significant that she has made an effort to unravel her sacrifices, sacrifices, patience, tolerance and duty in the vortex of my mind, who lives her life in one way or another in the arms of oppression, oppression and helplessness in the male dominated system. The sensitivity of human relationship and women's mental pains can be seen here.

**2. Content**

Through the study of Talasparshi, Karanta has sensibly made known the differences between Mai and Mana woman, her mental anguish, the statuses given in the society by the male dominated system, the mental sufferings that occur in all fields. The problems that come up in this novel are the things that are seen in the society on a daily basis.

"Family, political, social, cultural exploitation needs to be analyzed and criticized through the character-images depicted by the authors. 1 A woman's exploitation has been depicted in different psychological and family distress bases. Even today, the elements of this are the things that are found in daily life.

Tele: 8861814506
E-mail addresses:bullannavarbasusab@gmail.com

© 2017 Elixir All rights reserved

**ಸಾಮಾಜಿಕ:**

ನಾವು ಎಷ್ಟೇ ಮುಂದುವರೆದರೂ, ಸುಶಿಕ್ಷಿತರಾದರೂ ಸಹ ಸಮಾಜ ಇಂದಿಗೂ ಸಹ ಹೆಣ್ಣನ್ನು ಪಾರಂಪರಿಕ ಮೌಲ್ಯ ಸಂಪ್ರದಾಯ, ಕಂದಾಚಾರ, ಮೂಢನಂಬಿಕೆಗಳ ಮೂಲಕ ಅವಳ ಮೇಲೆ ಹತೋಟಿ, ನಿಯಂತ್ರಣವನ್ನು ಸಾಧಿಸುತ್ತಲೇ ಬಂದಿರುವದು ಇಂದಿಗೂ ಕೂಡ ಕಂಡುಬರುವ ಸಹಜ ಅಂಶವಾಗಿದೆ. ಮನು ಹೇಳುವಂತೆ ಸ್ತ್ರೀಗೆ ಸ್ವಾತಂತ್ರ ಬೇಡ ಅನರ್ಹಳು ಎಂಬಂಶ ಪ್ರಸ್ತುತವಾಗಿಯೂ ಇದೆ. ಇಂದು ಹೆಣ್ಣಿನ ಮೇಲೆ ನಡೆಯುವ ಘಟನಾವಳಿಗಳೆ ಸಾಕ್ಷಿಯಾಗಿವೆ.

ಸಾಮಾಜಿವಾಗಿ ಪೂರ್ಣ ಪ್ರಮಾಣದ ಸ್ವತಂತ್ರ ಬದುಕನ್ನು ನಡೆಸುವ ಹಕ್ಕನ್ನು ಮಹಿಳೆಗೆ ಇದುವರೆಗೂ ನೀಡಿಲ್ಲ. ಸಮಾಜವು ವಿಧಿಸಿರುವ ಕಟ್ಟುಪಾಡುಗಳೊಳಗೆ ಸಾರಾ ಅಬೂಬಕರ್ ಹೇಳುವಂತೆ "ನಿಯಮ ನಿಯಮಗಳ ನಡುವೆ" ಹೆಣ್ಣು ಯಾವ ರೀತಿಯ ಯಾತನೆ ಅನುಭವಿಸಿ ಮಾನಸಿಕವಾಗಿ ಜರ್ಜರಿತಳಾಗಿ ತನ್ನ ಅಸ್ತಿತ್ವಕ್ಕೆ ಧಕ್ಕೆ ತಂದುಕೊಳ್ಳುವ ಬದುಕನ್ನು ಸಾವಿನೊಂದಿಗೆ ಅಂತ್ಯವಾಗುವ ಅನೇಕ ಉದಾಹರಣೆಗಳು ನಮಗೆ ಯಥೇಚ್ಚವಾಗಿ ಸಿಗುತ್ತವೆ. "ಸಾಮಾಜಿಕ ಮೈಮನಗಳ ಸುಳಿಯಲ್ಲಿ ಹೆಣ್ಣು ಅನುಭವಿಸುವ ಸಾಮಾಜಿಕ ಬಹಿಷ್ಕಾರ, ನಿಂದೆ, ಅವಮಾನ, ಅಪಮಾನ, ಬಲಾತ್ಕಾರದಂತಹ ವಿಷ ವರ್ತುಲಗಳ ಮಧ್ಯೆ ಸಿಕ್ಕಿ ನರಳುವ, ಅಂತರಂಗದಲ್ಲಿ ಅದುಮಿಡಲ್ಪಟ್ಟ ಭಾವನೆಗಳನ್ನು ಬಹಿರಂಗಗೊಳಿಸುವ ಸಾಮಾಜಿಕ ಕಾಳಜಿಯನ್ನು ಕಾದಂಬರಿಯುದ್ಧಕ್ಕೂ ಕಾಣುತ್ತೇವೆ.2 ಪುರುಷ ಪ್ರಧಾನ ವ್ಯವಸ್ಥೆ ಯಜಮಾನಿಕೆ ನಡೆಸುವ ಅಧಿಕಾರ, ದೌರ್ಜನ್ಯ ತಮ್ಮ ಪ್ರಕರತೆ ಮೆರೆದು ಜಾಗೃತಿಯನ್ನು ಮೂಡಿಸಿವೆ.

ಮಂಗಳ ಕಾರ್ಯಗಳಲ್ಲಿ ವಿಧವೆಗೆ ಕೊಡುವ ಅಗೌರವ, ಗಂಡ ಸತ್ತ ನಂತರ ಅವಳ ಜರ್ಜರಿತ ಬದುಕು, ಸಮಾಜ ನೋಡುವ ದೃಷ್ಟಿಕೋನ, ಮಡಿ–ಮೈಲಿಗೆ ವಿಚಾರದಲ್ಲೂ ಹೆಣ್ಣನ್ನು ಕೀಳಾಗಿ ಕಾಣುವ ಪ್ರವೃತ್ತಿ, ಅನಿಷ್ಟ ಸಂಪ್ರದಾಯಗಳು ಇಂದಿಗೂ ಜೀವಂತವಾಗಿವೆ. ಸಮಾಜ ಹಳೆಯ ಕಂದಾಚಾರ, ಕಟ್ಟುಪಾಡುಗಳನ್ನು ಸಡಿಲಿಸಿ ಎಲ್ಲರ ಹಾಗೆ ಬದುಕನ್ನು ನಡೆಸುವ ಸದಾವಕಾಶವನ್ನು ನೀಡಬೇಕು. ವಿವಿಧ ಕ್ಷೇತ್ರಗಳಲ್ಲಿ ಸಮಾನತೆಯ ಹಕ್ಕನ್ನು ಕೊಡಬೇಕು. ಸ್ತ್ರೀ–ಪುರುಷ ಎಂಬ ಭೇದ ತೊಲಗಬೇಕು. ಅಂದಾಗ ಮಾತ್ರ ಸಾಮಾಜಿವಾಗಿ ಗೌರವಯುತ ಜೀವನ ನಡೆಸಬಲ್ಲಳು ಎಂದು ಹೇಳಿದರೆ ತಪ್ಪಾಗಲಾರದು.

**ಕೌಟುಂಬಿಕವಾಗಿ:**

ಕುಟುಂಬ ಎಂದ ತಕ್ಷಣ ನಮ್ಮೆದುರಿಗೆ ಕಾಣುವ ರೂಪ ಹೆಣ್ಣು, ಹೆಣ್ಣು–ಎಂದರೆ ಕುಟುಂಬ, ಕುಟುಂಬ–ಎಂದರೆ ಹೆಣ್ಣು ಎನ್ನುವಷ್ಟರ ಮಟ್ಟಿಗೆ ಅವಿನಾಭಾವ ಸಂಬಂಧ, ನಂಟನ್ನು

ಇಟ್ಟುಕೊಂಡಿರುವದು ಹೆಣ್ಣಿನ ಪ್ರಾಮುಖ್ಯತೆಯನ್ನು ಹಾಗೂ ಕೌಟುಂಬಿಕ ನೆಲೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವದು ಕಂಡು ಬರುತ್ತದೆ. ಇಡೀ ಕುಟುಂಬದ ಜವಾಬ್ದಾರಿಯನ್ನು ಹೆಣ್ಣು ನಿಭಾಯಿಸಿಕೊಂಡು ಹೋಗುವದು ಅವಳ ಸಹನೆ, ತಾಳ್ಮೆ, ತ್ಯಾಗಭಾವನೆಯ ಪ್ರತೀಕವಾಗಿವೆ. ಗಂಡ ಮಕ್ಕಳು, ಮನೆಯ ದೈನಂದಿನ ಕೆಲಸ ಕಾರ್ಯಗಳು, ಗಂಡ–ಮಕ್ಕಳ ಲಾಲನೆ, ಪಾಲನೆ, ಪೋಷಣೆ ತಿಂಡಿಯಿಂದ ಹಿಡಿದು ಊಟದ ವರೆಗಿನ ಜವಾಬ್ದಾರಿ ಮನೆಯ ಪ್ರತಿಯೊಂದು ಕೆಲಸದಲ್ಲಿ ಪುರುಸೊತ್ತಿಲ್ಲದೆ ತಾನು ಒಂದು ಯಂತ್ರದಂತೆ ಸದಾ ಕ್ರೀಯಾಶೀಲವಾಗಿರುವದು ನಿಜಕ್ಕೂ ಅವಳ ಔದಾರ್ಯತೆಗೆ ಸಾಕ್ಷಿಯಾಗಿದೆ.

ತನ್ನ ಜೀವನವನ್ನು ಕುಟುಂಬಕ್ಕಾಗಿಯೇ ಮೀಸಲಿಟ್ಟಿರುವುದನ್ನು ಲಂಕೇಶರ 'ಅವ್ವ' ಕವಿತೆ, ಸಿದ್ಧಲಿಂಗ ಪಟ್ಟಣಶೆಟ್ಟಿಯವರ ನನ್ನವ್ವ ಹೀಗೆ ತಾಯ್ತನದ ಅನೇಕ ಅಂಶಗಳನ್ನು ಕೌಟುಂಬಿಕ ನೆಲೆಯಲ್ಲಿ ಉದಾಹರಿಸಬಹುದಾಗಿದೆ. ರೇಷ್ಮೆಹುಳು ಗೂಡಿನೊಳಗೆ ಸುಂದರ ರೇಷ್ಮೆ ತಯಾರು ಮಾಡುತ್ತಾ ಕೊನೆಗೆ ಅದರೊಳಗಡೆ ತಾನು ಅವಸಾನ ಹೊಂದುವಂತೆ, ಕೊರಡು ಕೊನರಿ ಕಂಪಸೂಸುವಂತೆ ಹೆಣ್ಣು ತನ್ನ ಕುಟುಂಬದ ಏಳ್ಗೆಗಾಗಿ ತನ್ನ ಪ್ರಾಣವನ್ನೇ ಮುಡಿಪಾಗಿಟ್ಟು ಎಲ್ಲ ಜವಾಬ್ದಾರಿಗಳನ್ನು ಖುಷಿಯಿಂದಲೇ ಸ್ವೀಕರಿಸುವ ಮನೋಸ್ಥೈರ್ಯ ಹೆಣ್ಣಿನ ಮಹತ್ವ, ಕುಟುಂಬದ ಜೊತೆಗಿನ ಒಡನಾಟ, ಪ್ರೀತಿ, ವಿಶ್ವಾಸವನ್ನು ಎತ್ತಿ ತೋರಿಸುತ್ತದೆ. ಇಂತಹ ಸಂದರ್ಭದಲ್ಲಿ ಕೌಟುಂಬಿಕಾಗಿ ಹೆಣ್ಣು ಅನೇಕ ಮಾನಸಿಕ ಯಾತನೆಗಳನ್ನು ತಲ್ಲಣಗಳನ್ನು ಎದುರಿಸುತ್ತಿರುವದನ್ನು ಇಂದಿಗೂ ನಾವು ಕಾಣುತ್ತೇವೆ. ಆಧುನಿಕ ಜಗತ್ತಿನಲ್ಲಿಯೂ ಕುಟುಂಬದ ನಿರ್ವಹಣೆಗಾಗಿ ಅವಳು ಅನುಭವಿನಾನ ಮಾನಸಿಕ ಯಾತನೆ, ನೋವು, ಮನೆಯವರಿಂದ ಆಗುವ ದಿನನಿತ್ಯದ ಕಿರುಕುಳ, ದೌರ್ಜನ್ಯ ದಬ್ಬಾಳಿಕೆಗಳನ್ನು ಕುಟುಂಬದಲ್ಲಿ

**Social**

No matter how much we progress, even if we are well educated, the society continues to control and control women through traditional values, customs, superstitions. According to Manu, there is still a feeling that StiçÃ does not have independence and is unworthy. The incidents that happen to women today are a testimony.

So far women have not been given the right to lead a fully independent life in the society. We find plenty of examples of how women suffer psychologically battered lives that threaten their existence and end in death, as Sara Abubakar says, "between the rules" within the constraints imposed by society. "In the vortex of social illusions, we see the social concern of women who are trapped in the midst of the toxic circles of social exclusion, reproach, shame, humiliation, and coercion, and reveal the emotions that are buried in the space.

The disrespect given to widows in Mars activities, her battered life after her husband's death, her view of society, the tendency to look down on women even in the matter of lap-mile, evil traditions are still alive today. The society should relax the old rules and regulations and give them the opportunity to lead a life like everyone else.

Equal rights should be given in various fields. The distinction of Man-Women should be removed. It is not wrong to say that only then she can lead a socially respectable life.

**Family wise**

As soon as we think of family, the form that comes before us is female, female means family, family means female.

What is kept is the importance of the woman and her involvement in the family. The fact that a girl handles the responsibility of the entire family is a symbol of her tolerance, patience and sacrifice. The fact that she is always active like a machine without a husband in every household task, from the responsibility of husband and children, daily chores of husband and children, care, upbringing, nutrition to meals, is indeed a testimony of her generosity.

Devoting her life to her family can be exemplified in many aspects of motherhood in Lankesha's 'Avva' poem, Siddhalinga Pattanashetty's Nannavva. The woman who prepares beautiful silk in the silkworm cocoon and finally dies inside it, the woman who sacrifices her life for the prosperity of her family and accepts all the responsibilities with joy, highlights the importance of family, companionship, love and trust.

Even today, we see women facing many mental problems and anguish in such a situation. Even in the modern world, she continues to face the mental anguish, pain, daily harassment from family members, violent oppression in the family for the maintenance of the family. Will this end? G. S. Shivrudrappa's women poetry is perfect. Is it enough to embrace being a father? Need a different name? The poem is a mirror for this.

ಎದುರಿಸುತ್ತಲೇ ಇದ್ದಾಳೆ. ಇದಕ್ಕೆ ಕೊನೆ ಎಂದು? ಜಿ. ಎಸ್. ಶಿವರುದ್ರಪ್ಪನವರ ಸ್ತ್ರೀ ಕವಿತೆ ಪರಿಪೂರ್ಣತೆ ಮೆರೆದಿದೆ. ತಂದೆಯಾಗುವ ತಬ್ಬಿದಾಕೆ ಸ್ತ್ರೀ ಅಂದರೆ ಅಷ್ಟೇ ಸಾಕೆ? ಬೇರೆ ಹೆಸರು ಬೇಕೆ? ಎಂಬ ಕವಿತೆ ಇದಕ್ಕೆ ಕೈಗನ್ನಡಿಯಾಗಿದೆ.

ಕಾರಂತರು ಕೌಟುಂಬಿಕ ನೆಲೆಗಳಲ್ಲಿ ಹೆಣ್ಣು ಯಾವ ರೀತಿಯಲ್ಲಿ ತುಳಿತಕ್ಕೊಳಪಟ್ಟಿದ್ದಾಳೆ, ಅನುಭವಿಸುವ ಮನಸ್ಥಿತಿಗಳನ್ನು ತುಂಬಾ ಮನಮುಟ್ಟುವಂತೆ ಪಾತ್ರಗಳ ಮೂಲಕ ಸಂದರ್ಭಕ್ಕೆ ತಕ್ಕಂತೆ ಚಿತ್ರಿಸಿರುವದು ಕುಟುಂಬದಲ್ಲಿ ಹೆಣ್ಣಿಗಿರುವ ಸ್ಥಾನ–ಮಾನ ಅವಳ ಹೃದಯ ವೈಶಾಲ್ಯತೆಯನ್ನು ತಿಳಿಯಪಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕುಟುಂಬದ ಜೊತೆ ಹೆಣ್ಣು ಅವಿಭಾಜ್ಯ ಅಂಗವಾಗಿಯೇ ಬೆರೆತುಕೊಂಡಿದ್ದಾಳೆ. ಗಂಡ, ಅತ್ತೆ–ಮಾವ, ಮಕ್ಕಳಿಂದ ಶೋಷಣೆಗೊಳಗಾಗಿ ಮನೆ ಬಿಟ್ಟು ಅನಾಥಾಶ್ರಮ, ವೃದ್ದಾಶ್ರಮ ಸೇರುವಂತಹ ಘಟನೆಗಳು ಮಕ್ಕಳು ಸಾಕುತ್ತಿಲ್ಲ ಎಂದು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು ದಿನನಿತ್ಯವೂ ಕೇಳಿ ಬರುವ ಸಾರ್ವತ್ರಿಕ ಸಂಗತಿಗಳಾಗಿವೆ.

ಇದಕ್ಕೆಲ್ಲ ಮನುಷ್ಯನ ಸ್ವಾರ್ಥ, ಐಶಾರಾಮಿ ಬದುಕು. ಅಮಾನವೀಯ ವರ್ತನೆಗಳೇ ಕಾರಣಿಭೂತವಾಗಿವೆ,

ತಾಯಿ ಮಕ್ಕಳ, ಗಂಡನ ಸಾಮರಸ್ಯ ಇಂದು ಕಡಿಮೆಯಾಗಿದೆ. ಅತೀಯಾದ ತಂತ್ರಜ್ಞಾನ ಬದುಕಿಗೆ ಮಾನಸಿಕವಾಗಿ ಪರಿಣಮಿಸುತ್ತಿದೆ. "ಮಾನವೀಯ ಸಂಬಂಧಗಳು ಹದಗೆಟ್ಟಿವೆ. ಸ್ವಾರ್ಥ, ವ್ಯವಹಾರಿಕ ಮನಸ್ಥಿತಿಗಳು ಬದುಕನ್ನು ಜರ್ಜರಿತವಾಗಿ ಮಾಡಿವೆ. ಮಾನಸಿಕ ತಲ್ಲಣಗಳು ಹೆಚ್ಚಾಗಿವೆ. ಸಂತೃಪ್ತಿಯ ಬದುಕು ಸಿಗದೇ ಅನ್ಯಮಾರ್ಗದತ್ತ ಸಾಗುತ್ತಾ ಬದುಕು ಜರ್ಜರಿತವಾಗಿ ಅತೃಪ್ತಿಯ ತಾಣವಾಗಿ ಮಾರ್ಪಾಡಾಗುತ್ತಿದೆ.3 ಹಣ, ಅಧಿಕಾರ, ಅಂತಸ್ತುಗಳಿಗಾಗಿ ಹೆಣ್ಣಿನ ಹತ್ಯೆ ಶೋಷಣೆಯಾಗುತ್ತಿರುವದು ವಿಷಾದಕರ ಸಂಗತಿ. ಕುಟುಂಬದಲ್ಲಿ ಭದ್ರತೆ ಗೌರವ ಸಿಗುವಂತಾಗಬೇಕು. ಕಾರಂತರು ಈ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆಂದು ಹೇಳಬಹುದು. ಬದುಕಿನ ಮೌಲ್ಯಗಳು ಪ್ರೀತಿ, ವಿಶ್ವಾಸ, ಸಾಮರಸ್ಯದ ಬದುಕಿಗೆ ಈ ಕಾದಂಬರಿ ಹೆಚ್ಚಿನ ಒತ್ತುಕೊಟ್ಟಿದೆ.

ಮೈಮನಗಳ ಸುಳಿಯಲ್ಲಿ ಕಾದಂಬರಿಯ ಭಾಷೆ ಶೈಲಿ–ತಂತ್ರ–ಕಾರಂತರು ತಮ್ಮದೇ ಆದ ಭಾಷಾ ವೈಖರಿಯ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವಂತಹ ಸರಳವಾಗಿ ತಮ್ಮ ಸುತ್ತ–ಮುತ್ತಲ ಪ್ರದೇಶಗಳಲ್ಲಿ ಬಳಕೆಯಾಗುವ ಭಾಷಿಕ ರಚನೆಯಲ್ಲಿ ತಮ್ಮ ಬರವಣಿಗೆಯನ್ನು ರಚಿಸಿರುವದು ಇಲ್ಲಿ ಯಥೇಚ್ಚವಾಗಿ ಕಂಡುಬರುತ್ತದೆ. "ಆಪ್ತತೆ ಮತ್ತು ಅನನ್ಯತೆಯ ಭಾಷಿಕ ಸಂರಚನೆ ಓದುಗ ಸಹೃದಯರಿಗೆ ಆಪ್ತತೆಯನ್ನು ಹೆಚ್ಚಿಸುತ್ತದೆ. ಕೆಲವೊಂದು ಪ್ರಾದೇಶಿಕ ಸೊಗಡಿನ ಗ್ರಾಮ್ಯ ಶಬ್ದಗಳ ಪದಬಳಕೆ, ಸಂಭಾಷಣೆಯ ರೂಪದಲ್ಲಿ ಕಾದಂಬರಿಯುದ್ದಕ್ಕೂ ಸ್ಪಷ್ಟವಾಗಿ ಕಂಡುಬರುತ್ತದೆ.4 ಹೀಗಾಗಿ ಭಾಷಿಕ ರಚನೆಯ ಹಿನ್ನೆಲೆಯಲ್ಲಿ ಕಾರಂತರು ಉಳಿದ ಬರಹಗಾರರಿಗಿಂತ ಭಿನ್ನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಛಾಪನ್ನು ಮೂಡಿಸಿರುವದು ಗಮನಾರ್ಹವಾದುದು. "ಪಾತ್ರಗಳ ಮೂಲಕ ಚಿತ್ರಿಸುವ ಭಾಷೆಯ ತಂತ್ರಗಾರಿಕೆ, ಸಂದರ್ಭಕ್ಕೆ ತಕ್ಕಂತೆ ಭಾಷಾಶೈಲಿಯ ವಿನೂತನ ಪ್ರಯೋಗಶೀಲತೆ ಕಾರಂತರ ಬರಹದ ವಿಶೇಷತೆಯಾಗಿದೆ. ಅವರು ಕಾದಂಬರಿಯಲ್ಲಿ ವ್ಯಕ್ತಪಡಿಸುವ ಹಳ್ಳಿಗಳ ಚಿತ್ರಣ ಸುತ್ತ–ಮುತ್ತಲಿನ ಪರಿಸರ, ಅಲ್ಲಿಯ ಬದುಕಿನ ರೀತಿ, ಜೀವನಕ್ರಮ, ಸಾಂಸ್ಕೃತಿಕ ಚಹರೆಗಳು ಓದುಗರಿಗೆ ದಿಗ್ದರ್ಶನವನ್ನು ಮಾಡಿಸುವಂತೆ ಭಾಸವಾಗುತ್ತದೆ.5 ನಮ್ಮ ಕಣ್ಣಮುಂದೆ ಬರುವ ಹಾಗೆ ಭಾಷೆಯ ತಂತ್ರಗಾರಿಕೆ ಕಾರಂತರಿಗೆ ಮಾತ್ರ ಸಿದ್ಧಿಸಿದ್ದು ಎಂದು ಹೇಳಿದರೆ ತಪ್ಪಾಗಲಾರದು.

**3. ಉಪಸಂಹಾರ:**

ಈ ಎಲ್ಲ ವಿಷಯಗಳ ವಸ್ತುವೈವಿಧ್ಯತೆ, ಸಂಕೀರ್ಣ ಬದುಕಿನ ಲಾಲಸೆಗಳು ಈ ಕಾದಂಬರಿಯುದ್ದಕ್ಕೂ ಅರವನ್ನು ಮೂಡಿಸುವ, ಆದರ್ಶ ಜೀವನದ ಸರಳ–ಸಹಜತೆಯ ಮೌಲ್ಯಗಳನ್ನು ಹೆಚ್ಚಿಸುವಂತೆ ಅರ್ಥವತ್ತಾಗಿ ಪ್ರತಿಪಾಸಿಸಿದ್ದಾರೆ. ಆ ಮೂಲಕ ನಾವು ನಮ್ಮ ಬಾಂಧವ್ಯ, ವಿಶ್ವಾಸದ ಮನೋಧರ್ಮ ಹೆಣ್ಣಿನ ಬಗೆಗಿನ ಅಂಧಶ್ರದ್ಧೆ ಅಸಡ್ಡೆಗಳು ಬಿಟ್ಟು ಲಿಂಗ ತಾರತಮ್ಯ ಮಾಡದೇ ಸಮಾನತೆಯ ಆಶಯ ಹೊಂದಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಸೂಚ್ಯವಾಗಿ ಚಿತ್ರಿಸಿದೆ.

**ಪರಾಮರ್ಶನ ಗ್ರಂಥಗಳು:**


೧. ಶಿವರಾಮಕಾರಂತ – ಮಾಲಿನಿ ಮಲ್ಯ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨. ಮೈಮನಗಳ ಸುಳಿಯಲ್ಲಿ – ಡಾ. ಶಿವರಾಮಕಾರಂತ, ಸಪ್ನಾ ಬುಕ್ ಹೌಸ, ಬೆಂಗಳೂರು

೩. ಶಿವರಾಮಕಾರಂತರ ಎರಡು ಅಧ್ಯಯನಗಳು – ಡಾ. ಟಿ. ಸಿ. ಅಶೋಕ

೪. ಶಿವರಾಮಕಾರಂತ – ತಾಳ್ತಜೆ ವಸಂತಕುಮಾರ ಕರ್ನಾಟಕ ಸಾಹಿತ್ಯ ಅಕಾಡೆಮಿ,

೫. ಸಾಲು ದೀಪಗಳು – ಸಾಹಿತ್ಯ ಅಕಾಡೆಮಿ, ಬೆಂಗಳೂರು


Karantaru has portrayed the way in which women are oppressed in family settings, the moods they experience in a very touching way through the characters and they have tried to make the woman's position in the family known and her heart wide. A woman is an integral part of the family. Incidents such as being exploited by husbands, parents-in-law, children and leaving home to join orphanages and old age homes, where children commit suicide because they are not taking care of them, are common occurrences that are heard daily.

All this is man's selfishness, luxurious life. Inhumane behaviors are the cause,

The harmony between mother, children and husband is less today. Too much technology is becoming psychological for life. "Human relations have deteriorated. Selfishness and commercial mindsets have made life miserable. Mental distress has increased. Life is becoming a place of misery and unhappiness without finding a happy life. It is a sad fact that women are being exploited in the family for money, power and status. Security should be respected. It can be said that Karanta has tried in this regard. The values of life are love, trust and harmony in this novel.

In the vortex of ideas, the language of the novel is style-technique-characters have created their writing in the linguistic structure used in their surrounding areas so that the common people can understand it through their own language style. "Linguistic configuration of closeness and uniqueness increases the closeness to the reader. The use of some regional slang words is evident throughout the novel in the form of dialogue.4 Thus, it is significant that Karant has made his mark in the field of literature unlike other writers in the background of linguistic structure. Innovative experimentation is the hallmark of Karantara's writing. The description of the villages in the novel, the surrounding environment, the way of life, the lifestyle, and the cultural aspects of the village feel like giving the reader a vision.

**3. Conclusion**

The material diversity of all these things, the longings of complex life, which creates the essence throughout this novel, are meaningfully proposed to increase the values of the simple-naturalness of an ideal life. By that, it has implicitly depicted that we need to leave our attachment, trust mentality and indifference towards women and aspire for equality without gender discrimination.

**Reference Books**


1. Sivaramakara - Malini Mallya Sahitya Academy, Bangalore
2. In the whirlpool of thoughts - Dr. Shivaramakaranta, Sapna Book House, Bangalore
3. Two studies by Sivaramakar - Dr. T. C. Ashoka
4. Shivaramakaranta - Taltaje Vasantakumar Karnataka Sahitya Academy,
5. Row Lights - Sahitya Academy, Bangalore